1884ನೇ ಇಸವಿ ಅರ್ಜೀ ನಂಬರ್ 138.

ಮೃತಪಟ್ಟ ಗುತ್ತಲದ ವೀರಪ್ಪ, ಮತ್ತು ಗುತ್ತಲದ ಪವಾಡಪ್ಪ ಇವರ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಗುತ್ತಲದ ಬಸಪ್ಪ, ಮೃತಪಟ್ಟ ಸದರೀ ಗುತ್ತಲದ ವೀರಪ್ಪನಿಗೆ ಬಾಸಾಮಗನು ಮತ್ತು ಗುತ್ತಲದ ಪವಾಡಪ್ಪನಿಗೆ ಮುಂಮಗನು ಆಗಬೇಕೆಂಬ ಹಕ್ಕುದಾರೀ ಮೇಲೆ ಕೊಪ್ಪ ತಾಲ್ಲೂಕು ದುಡೇಹಳ್ಳಿ ಸ್ಥಳದ ಗುತ್ತಲದ ಬಸಪ್ಪನು ಸದರೀ ದುಡೇಹಳ್ಳಿ ವಾಸಸ್ಥನಾಗಿ ಮೃತಪಟ್ಟ ಗುತ್ತಲದ ವೀರಪ್ಪ ಮತ್ತು ಗುತ್ತಲದ ಪವಾಡಪ್ಪ ಇವರ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲಗಳನ್ನು ವಸೂಲ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರೆಗೆ ಸರ್ಟಿಫಿಕೇಟು ಬಗ್ಯೆ ಈ ಕೋರ್ಟಿಗೆ ಖಾಯಿಷ್ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಗುತ್ತಲದ ಬಸಪ್ಪನ ಅರ್ಜೀಯನ್ನು 1885ನೇ ಇಸವಿ ಫಿಬ್ರವರೀ ತಿಂಗಳು ತಾರೀಖು 17ರಲ್ಲು ಕೇಳಿ ಸರಟಿಫಿಕೇಟು ಪಡಿಯತಕ್ಕ ಯೋಗ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಗುತ್ತಲದ ವೀರಪ್ಪ ಮತ್ತು ಗುತ್ತಲದ ಪವಾಡಪ್ಪ ಇವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಡಿಸಂಬರ್ ತಿಂಗಳು 23ನೇ ತಾರೀಖಿನಲ್ಲಿ ಕೋರ್ಟಿನ ಮೊಹರಿನಿಸಿ ನಮ್ಮ ದಸ್ತಖತ್ತುಡನೆ ಕೊಡೋಣಾಗಿದೆ.

ತಾರೀಖು 31ನೇ ಡಿಸಂಬರ್ 1884.

ಇದರಿಂದ ಪ್ರಕಟಪಡಿಸುವದೇನಂದರೆ, ಶಿವಮೊಗ್ಗಾ ಮತ್ತು ಕಡೂರು ಡಿಸ್ಟ್ರಿಕ್ಟುಗಳಿಂದ ಕಮ್ಮಿಟಾದ ಕ್ರಿಮಿನಲ್ ಮೊಕದ್ದಮೆಗಳ ದರ್ಯಾಫ್ತೀ ಬಗ್ಯೆ ಶೆಷನ್‌ಗಳು ಸನ್ 1885ನೇ ಇಸವಿಯಲ್ಲಿ ಇದರಡಿ ಕಂಡ ತಾರೀಖುಗಳಲ್ಲಿ ಸದರೀ ಡಿಸ್ಟ್ರಿಕ್ಟುಗಳ ಹೆಡ್‌ಕ್ವಾಟರಗಳೊಳಗೆ ನಡಿಸಲ್ಪಡುವವು;—

ಶಿವಮೊಗ್ಗಾ ಡಿಸ್ಟ್ರಿಕ್ಟು.		ಕಡೂರು ಡಿಸ್ಟ್ರಿಕ್ಟು.	
5ನೇ ಜನವರೀ	ಸೋಮವಾರ.	2ನೇ ಫಿಬ್ರವರೀ	ಸೋಮವಾರ.
2ನೇ ಮಾರ್ಚೀ	ಸೋಮವಾರ.	4ನೇ ಮೇ	ಸೋಮವಾರ.
8ನೇ ಏಪ್ರಿಲ್	ಬುಧವಾರ.	3ನೇ ಆಗಸ್ಟು	ಸೋಮವಾರ.
1ನೇ ಜೂನ್	ಸೋಮವಾರ.	2ನೇ ನವಂಬರ್	ಸೋಮವಾರ.
6ನೇ ಜುಲೈ	ಸೋಮವಾರ,		
7ನೇ ಶಪ್ಟಂಬರ್	ಸೋಮವಾರ.		
5ನೇ ಅಕ್ಟೋಬರ್	ಸೋಮವಾರ.		
7ನೇ ಡಿಸಂಬರ್	ಸೋಮವಾರ.		

ದರ್ಯಾಫ್ತು ಬಗ್ಯೆ ಮೊಕದ್ದಮೆಗಳನ್ನು ಕಮ್ಮಿಟ್ ಮಾಡಲು ಅಧಿಕಾರವುಳ್ಳ ದರೋಬಸ್ತು ಮಾಜಿಸ್ಟ್ರೇಟುಗಳೂ, ತಾವು ಕಮ್ಮಿಟ್ ಮಾಡುವ ಮೊಕದ್ದಮೆಗಳಲ್ಲಿನ ಫಿರ್ಯಾದೀಗಳು ಮತ್ತು ಸಾಕ್ಷೀಗಳು ಆಯಾ ಡಿಸ್ಟ್ರಿಕ್ಟುಗಳ ಹೆಡ್‌ಕ್ವಾಟರುಗಳೊಳಗೆ ಮೇಲೆ ನಮೂದಿಸಲ್ಪಟ್ಟ ತಾರೀಖುಗಳಲ್ಲಿ ಬೆಳಿಗ್ಯೆ 11 ಘಂಟೆಗೆ ಈ ಕೋರ್ಟಿನ ರೂಬರೂ ಹಾಜರಾಗುವಂತೆ ಅವರುಗಳಿಂದ ಮುಚ್ಚಳಿಕೆ ತೆಗದು ಕೊಳ್ಳತಕ್ಕದ್ದೆಂದು ಕೋರಲ್ಪಟ್ಟಿರುತ್ತಾರೆ.

ಟಿ. ನರಹರಿರಾವ್,
ಸೆಷನ್ಸ್ ಜಡ್ಜ್.

ತಾರೀಖು 6ನೇ ಡಿಸಂಬರ್ 1884.

ಇದರಿಂದ ತಿಳಿಯಪಡಿಸುವದೇನಂದರೆ, ಸನ್ 1885ನೇ ಇಸವಿ ಫೆಬ್ರವರಿ ಗುರ್ರೇ ತಾರೀಖು ಲಾಗಾಯಿತು ಜೂನ್ 30ನೇ ತಾರೀಖುವರೆಗೆ ಇದರಡಿ ಕಂಡ ಪ್ಲಾಂಟೇಷನ್‌ಗಳು ಬೇಟೆಗೇ ಕಾಲಕ್ಕೋಸ್ಕರ ಮುಚ್ಚಲ್ಪಡುತವೆ. ಬೇಟೆಗಾರರು ಪ್ಲಾಂಟೇಷನ್‌ಗಳ ಚಾರ್ಜಿನಲ್ಲಿರುವ ಫಾರೆಸ್ಟು ಅಪ್ರೆಂಟಿಸಿಯವರ ವಿಶೇಷ ಅಪ್ಪಣೆ ವಿನಾಯಿ ಸದರೀ ಪ್ಲಾಂಟೇಷನ್‌ಗಳನ್ನು ಪ್ರವೇಶ ಮಾಡಲು ಅವಕಾಶ ಕೊಡಲ್ಪಡುವದಿಲ್ಲ

ಪ್ಲಾಂಟೇಷನ್‌ಗಳು.		ತಾಲ್ಲೂಕು.
ಕಾಡಗೋಡಿ		ಹೊಸಕೋಟೆ
ಜಡಿಗೇನಹಳ್ಳಿ	(ಹಳೇದು ಮತ್ತು ಹೊಸದು)	ಡಿಟ್ಟೋ
ಸೆಲಾಲ್	(A. B. ವ C.)	ಡಿಟ್ಟೋ

ತಟ್ನೂರು	ಡಿಟ್ಟೋ
ತಿಂಡಲ್	ಹೊಸಕೋಟೆ ಮತ್ತು ಮಾಲೂರು
ಅಪ್ಪಸಂದ್ರ	ಡಿಟ್ಟೋ
ದೊಡ್ಡಹರಡಿ	ಹೊಸಕೋಟೆ ಮತ್ತು ಶಿಡ್ಲಘಟ್ಟ
ಚಿಕ್ಕಹರಡಿ	ಡಿಟ್ಟೋ
ರಾಮಚಂದ್ರಾಪುರ	ಮಾಲೂರು
ಪ್ಲಾಂಟೇಷನ್‌ಗಳು.	ತಾಲ್ಲೂಕು.
ಮಾರಸಂದ್ರ	ಮಾಲೂರು
ಕುರಂಡಹಳ್ಳಿ (ಹಳೇದು ಮತ್ತು ಹೊಸದು)	ಡಿಟ್ಟೋ
ಜಂಗಮಕೋಟೆ	ಶಿಡ್ಲಘಟ್ಟ
ಈನೂರು	ಬೆಂಗಳೂರು

ತಾರೀಖು 7ನೇ ಜನವರಿ 1885.

ಕಾಡುಗೋಡಿ ಪ್ಲಾಂಟೇಷನ್‌ನಲ್ಲಿ ಹಾಲೀ ಇರತಕ್ಕ ಸುಮಾರು 2,500 ಒಣಗಿದ ಕ್ಯಾಸರೀನಾ ಮರಗಳನ್ನು ಮಾಹೇಮಜಕೂರ 20ನೇ ತಾರೀಕು ಮಂಗಳವಾರದ ದಿನ ಸದರೀ ಜಾಗಾದಲ್ಲಿ ಫಾರೆಸ್ಟ್ ಅಪ್ರೆಂಟಿಸ ಯವರು, ಹೊಸಕೋಟೇ ತಾಲ್ಲೂಕು ಅಮಲ್ದಾರರೊಡನೆ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸುವರು.

ಎಸ್. ಪಿ ಬಾಪೂರಾವ್,
ಫಾರೆಸ್ಟ್ ಅಪ್ರೆಂಟಿಸ್ ಇನ್ ಚಾರ್ಜ್ ಪ್ಲಾಂಟೇಷನ್ಸ್.

ಪ್ರಕಟನೆ.

ಕರ್ನಾಟಕ ಪೆನ್ಷನರುಗಳಿಗೆಲ್ಲಾ ಗವರ್ನಮೆಂಟಿನವರ ಹುಕ್ಕುಂ ಮೇರೆ ಇದರಿಂದ ತಿಳಿಯಪಡಿಸುವದೇನಂದರೆ, ಅವರು ತಮ್ಮ ಕುಟುಂಬದವರು ನಿಕಾವಾದರೂ ಸರಿ ಅಲ್ಲದೆ ಷಾದಿ ಯಾ ವಿವಾಹವಾದರೂ ಸರಿ, ಅಂತವರ ಹೆಸರುಗಳನ್ನು ಕೂಡಲೇ ಮದರಾಸ್ ಚೇಪಾಕಿನಲ್ಲಿರುವ ಗವರ್ನಮೆಂಟ್ ಆಫೀಸಿಗೆ ತಿಳಿಸತಕ್ಕದ್ದು. ಇನ್ನು ಮುಂದೆ ಈ ಹುಕುಂ ಅನುಸರಿಸಿ, ನಿಕಾ ಮಾಡಿಕೊಳ್ಳುವವರಾಗಲಿ, ಅಥವಾ ವಿವಾಹ ಮಾಡಿಕೊಳ್ಳುವವರಾಗಲಿ ಬದಸ್ತೂರ್ ತಿಳಿಸತಕ್ಕದ್ದು. ಮತ್ತೂ ತಿಳಿಸುವದೇನಂದರೆ, ಸ೯ 1885ನೇ ಇಸವಿ ಜನವರೀ ಗುರ್ರೆ ತಾರೀಖಿನೊಳಗಾಗಿ ಹಾಗೆ ಮಾಡುವದಕ್ಕೆ ತಪ್ಪಿದಲ್ಲಿ, ಅಂತವರ ಕುಟುಂಬಗಳಿಗೆ ಕಂಪಾಷಿನೇಟ್ ಅಲೋವೆನ್ಸ್ ಕೊಡಲ್ಪಡಲಾರದು.

ಸಿ. ಡಿ. ಬೇಯ್ನ್ಸ್, ಲೆಫ್ಟಿನೆಂಟ್ ಕರ್ನಲ್.
ಗವರ್ನಮೆಂಟ್ ಏಜನ್ಸೀ ಇನ್‌ಚಾರ್ಜ್ ಆಫೀಸರ್,
ಚೇಪಾಕ್.

அறிக்கை.

கர்னாடக பென்ஷனர்களெல்லாருக்கும் கவரன்மெண்டாருக்கிரமப்படி, இதனால் அறிவிப்பதென்னவென்றால், அவர்கள், தங்களுடைய சமுசாரங்கள் நிக்காவானாலுஞ்சரி, சாதியானாலுஞ்சரி, அந்த சம்சாரங்களின் பெயர்களை உடனே சேபாக் கவரன்மெண்டு ஏஜெண்டு ஆபீசில் தெரிவிக்கவேண்டியது. நிக்காவாகவாவது, சாதியாகவாவது, இனிமேல் கல்யாணம் செய்பவர்களும், இந்த உத்திரவை அனுசரித்து, அப்படியே தெரிவிக்கவேண்டியது. பின்னும் அறிவிப்பது என்னவென்றால, 1885௵ ஜனவரி௴ 1உக்குள்ளாக அப்படி செய்யாவிட்டால், அப்படி செய்யாதவர்கள் காலத்துப்பிறகு அவர்களுடைய சமுசாரங்களுக்கு கம்பாஷனேட் அலவென்ஸ் கொடுக்கப்படமாட்டாது.

GOVT. AGENT'S OFFICE,
Chepák, 11th October 1884.

(Signed) C. D. BAYNES, LIEUT.-COL.,
In charge of the Govt. Agency, Chepák.

Mysore Government Press, Bangalore.—1885.